# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 816 |
| ಉತ್ತರಿಸಬೇಕಾದ ದಿನಾಂಕ | : | 12-12-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಸಂಸ್ಥೆಗಳನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕ್‌ಗಳ ಬದಲಾಗಿ ಸಹಕಾರ ಬ್ಯಾಂಕ್‌ಗಳಲ್ಲಿ ಹಣ ಠೇವಣಿ ಇಡುವ ಯೋಜನೆ ಹೊಂದಿದೆಯೇ; ಹೊಂದಿದ್ದಲ್ಲಿ, ರೂಪುರೇಷೆಗಳ ಬಗ್ಗೆ ಮಾಹಿತಿ ನೀಡುವುದು; | ರಾಜ್ಯದಲ್ಲಿ ಸಹಕಾರ ಸಂಸ್ಥೆಗಳನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ರಾಷ್ಟ್ರೀಕೃತ ಬ್ಯಾಂಕುಗಳ ಬದಲಾಗಿ ಸಹಕಾರ ಬ್ಯಾಂಕಗಳಲ್ಲಿ ಹಣ ಠೇವಣಿ ಇಡುವ ಯೋಜನೆ ಇರುವುದಿಲ್ಲ.<br>ಆದರೆ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ: ಎಫ್‌ಡಿ/91/ಟಿಎಆರ್/2022 ದಿನಾಂಕ: 21-10-2022 ರ ಪ್ರಕಾರ "and fixed deposit with Karnataka State cooperative Apex Bank Ltd., Bangalore on par with Regional Rural Bank" ಎಂದು ಅವಕಾಶ ಕಲ್ಪಿಸಲಾಗಿದೆ. |
| ಆ) | ಸಹಕಾರ ಪತ್ತಿನ ಸಂಸ್ಥೆಗಳಿಗೆ ನಬಾರ್ಡ್ ತನ್ನ ಪಾಲಿನ ರಿಯಾಯಿತಿ ಸಾಲದ ಮೊತ್ತವನ್ನು ಕಡಿಮೆ ಮಾಡಿರುವುದು ಹಾಗೂ ಮೊತ್ತವನ್ನು ವಿಳಂಬವಾಗಿ ಪಾವತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕಳೆದ 03 ವರ್ಷಗಳಲ್ಲಿ ನಬಾರ್ಡ್‌ಗೆ ಸಲ್ಲಿಸಿದ ಮಿತಿ ಮಂಜೂರಾತಿ ಪ್ರಸ್ತಾವನೆ ಕುರಿತಂತೆ ವಿವರಣೆಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ.<br>ಪ್ರಸಕ್ತ ಹಣಕಾಸು ವರ್ಷ 2023-24 ನೇ ಸಾಲಿಗೆ ನಬಾರ್ಡ್ ಸಂಸ್ಥೆಯಿಂದ ಸೆಪ್ಟೆಂಬರ್-2023 ರ ಮಾಹೆಯಲ್ಲಿ ಬಿಡುಗಡೆಯಾಗಬೇಕಾಗಿದ್ದ ಅಲ್ಪಾವಧಿ ಕೃಷಿ ಸಾಲದ ಮಿತಿ ಬಿಡುಗಡೆಯು ವಿಳಂಬವಾಗಿರುತ್ತದೆ. |

| | | |
|---|---|---|
| | | ಪ್ರಸಕ್ತ ಹಣಕಾಸು ವರ್ಷದಲ್ಲಿ ನಬಾರ್ಡ್ ಸಂಸ್ಥೆಯಿಂದ ದಿನಾಂಕ:17-11-2023 ರಂದು ರೂ.5,600.00 ಕೋಟಿಗಳ ಅಲ್ಪಾವಧಿ ಕೃಷಿ ಸಾಲದ ಮಿತಿಯು ರಿಯಾಯಿತಿ ದರದಲ್ಲಿ ಮಂಜೂರಾತಿಯಾಗಿರುತ್ತದೆ. 2023-24 ನೇ ಸಾಲಿನ ಮಿತಿಯ ಅಡಿಯಲ್ಲಿ ನಬಾರ್ಡ್ ಸಂಸ್ಥೆಯ ಶೇ.50 ರಷ್ಟು ಅಂದರೆ ರೂ.2,800.00 ಕೋಟಿಗಳು ದಿನಾಂಕ:24-11-2023 ರಂದು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು, ಈ ಬ್ಯಾಂಕಿಗೆ ಬಿಡುಗಡೆ ಮಾಡಿರುತ್ತಾರೆ. ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ |
| ಇ) | ರಾಜ್ಯದಲ್ಲಿ ಸಹಕಾರ ಕ್ಷೇತ್ರವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರ ಕಾಯ್ದೆಗೆ ಅಗತ್ಯ ತಿದ್ದುಪಡಿ ತರುವ ಉದ್ದೇಶ ಸರ್ಕಾರ ಹೊಂದಿದೆಯೇ; ಹೊಂದಿದ್ದಲ್ಲಿ, ರೂಪುರೇಷೆಗಳ ಬಗ್ಗೆ ಮಾಹಿತಿ ನೀಡುವುದು? | ಸಹಕಾರ ಕ್ಷೇತ್ರವನ್ನು ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 2004 ಗಳಿಗೆ ಪ್ರಸ್ತುತ ಅಗತ್ಯಕ್ಕೆ ಅನುಗುಣವಾಗಿ ತಿದ್ದುಪಡಿ ತರುವ ಸಂಬಂಧ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲು, ಸರ್ಕಾರದ ಆದೇಶ ಸಂ: ಸಿಒ 48 ಸಿಎಲ್‌ಎಮ್ 2022(ಇ) ಬೆಂಗಳೂರು, ದಿನಾಂಕ: 15.7.2023 ರನ್ವಯ ಶಾಸಕರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.<br><br>ಸಮಿತಿಯು ಕಾಯ್ದೆಗಳಿಗೆ ಅಗತ್ಯವಿರುವ ತಿದ್ದುಪಡಿ ತರುವ ಸಂಬಂಧ ಕಾಲಕಾಲಕ್ಕೆ ಸಭೆಗಳನ್ನು ನಡೆಸುತ್ತಿದ್ದು, ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |

**ಸಂಖ್ಯೆ: ಸಿಒ 159 ಪಿಎಂಸಿ 2023**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ – ೬

(ರೂ.ಕೋಟಿಗಳಲ್ಲಿ)

| ಹಣಕಾಸು ವರ್ಷ | ಸಂಭವನೀಯ ವಿತರಿಸಬಹುದಾದ ತಳಮಟ್ಟದ ಸಾಲದ ಗುರಿ | ನಬಾರ್ಡ್‌ಗೆ ಸಲ್ಲಿಸಲಾದ ಪ್ರಸ್ತಾವನೆ ಶೇ.60 ರಷ್ಟು (ರಿಯಾಯಿತಿ ಮಿತಿ) | ನಬಾರ್ಡ್‌ಗೆ ಸಲ್ಲಿಸಲಾದ ಪ್ರಸ್ತಾವನೆ ಶೇ.20 ರಷ್ಟು (ಹೆಚ್ಚುವರಿ ಮಿತಿ) | ಬಿಡುಗಡೆಯಾದ ರಿಯಾಯಿತಿ ಮಿತಿ | ಬಿಡುಗಡೆಯಾದ ಹೆಚ್ಚುವರಿ ಮಿತಿ |
|---|---|---|---|---|---|
| 2021–22 | 18536.00 | 11121.60 | 3707.20 | 5483.90 | 2000.00 |
| 2022–23 | 23195.98 | 13917.59 | 4639.20 | 5550.00 | 4500.00 |
| 2023–24 | 22927.44 | 13756.46 | 4585.49 | 5600.00 | 5200.00 |

ಸಹಕಾರ ಸಂಘಗಳ ಅಪರ ನಿಬಂಧಕರು
(ಸಾಲ)
ಸಹಕಾರ ಸಂಘಗಳ ನಿಬಂಧಕರ ಕಛೇರಿ
ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52

Scanned with OKEN Scann